ಮಾತುಕತೆಯ ವಿಷಯವನ್ನು ಬದಲಾಯಿಸುವುದು ಉಚಿತವೆಂದು ತಿಳಿದು ಹೇಳಿದ, "ನೀವು ಚಹಾ ಕುಡಿದಿರ?"

"ಹೂಂ, ಕುಡಿದೆ. ಚಹಾವನ್ನಷ್ಟೇ ಅಲ್ಲ, ವಿಷವನ್ನು ಸಹ ಕುಡಿದಿದ್ದೇನೆ." ಶ್ರೀಕಂಠನ ಮಾತಿನಲ್ಲಿ ಕಹಿ ಹೆಚ್ಚುತ್ತಿತ್ತು, "ನಾನು ಬೇರೊಂದು ವಿಷಯವನ್ನು ಯೋಚಿಸುತ್ತಿದ್ದೆ. ನಿಜವಾಗಿ ನಿನ್ನಿಂದ ಅದನ್ನೇ ಮಾಡಿಸಬೇಕೆಂದಿದ್ದೆ."

"ಏನು?" ನಾಥಜಿ ಆಶ್ಚರ್ಯಗೊಂಡ.

"ಈಗ ಈ ಮನೆಯನ್ನು ಮಾರಿಬಿಡುವುದೆಂದು ಯೋಚಿಸಿದ್ದೆ. ದಿಲ್ಲಿಯವನು ಇನ್ನೂ ಮೌನವಾಗಿದ್ದಾನೆ. ಅವನು ತನ್ನ ಭಾಗದ ಬಗ್ಗೆ ಏನು ಯೋಚಿಸಿದ್ದಾನೋ, ತಿಳಿಯದು. ಇವತ್ತು ಅಥವಾ ನಾಳೆ ನಾನು ಸಾಯಲೇ ಬೇಕು. ನನ್ನ ರಕ್ತವನ್ನು ಚೆನ್ನಾಗಿ ಗುರುತಿಸಬಲ್ಲೆ. ಹದಿಮೂರನೆಯ ದಿನ ಮುಗಿಯುವುದಕ್ಕೆ ಮೊದಲೇ ಅವರು ನನ್ನ ಭಾಗವನ್ನು ಹರಾಜಿಗೆ ಹಾಕ್ತಾರೆ. ಅದಕ್ಕೇ ನಾನು ಬದುಕಿರುವಾಗಲೇ ಈ ಜಂಜಾಟ ಮುಗಿದರೆ ಒಳ್ಳೆಯದೆಂದು ಯೋಚಿಸಿದ್ದೇನೆ. ನಾನು ಸತ್ತ ಮೇಲೆ ವಿಷಯ ಮುಂದುವರೆಯಬಾರದು, ಈ ಚೇಳುಗಳು ಅಲ್ಲಿಗೂ ಬಂದು ನನ್ನನ್ನು ಕುಟುಕಬಾರದು."

ಶ್ರೀಕಂಠನ ಮಾತು ಕೇಳಿ ನಾಥಜಿ ದಂಗಾದ. ತನ್ನ ಸಹೋದರನ ಈ ತೀರ್ಮಾನ ಅವನಿಗೆ ಅಸಂಬದ್ಧ ಮತ್ತು ಆಕಸ್ಮಿಕವೆಂದು ಕಂಡಿತು; ಅಪ್ರಿಯ ಮತ್ತು ಕಹಿ ಸತ್ಯ ಎಂದೂ ಕಂಡಿತು. ಅಕಸ್ಮಾತ್ ಹಾವೊಂದು ಕಚ್ಚಿ, ಅದರ ವಿಷ ತನ್ನ ಅಂಗಾಂಗಳಿಗೆ ವ್ಯಾಪಿಸುತ್ತಿದೆ ಎಂದು ಅನ್ನಿಸಿತು. ಶ್ರೀಕಂಠ ಮಣ್ಣಿನ ಹಸಿ ಪಾತ್ರೆಗಳಿಂದ ತುಂಬಿದ

